- -                    ಅಸಲು ದಾವೆ ಸಂ: **45/2019.** ಪಿ.ಡಬ್ಲು**-2**

**ದಿ: 11-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಎಸ್ ಎಸ್ ಐ ಕ್ಯೂ   ವಕೀಲರಿಂದ:-**

1. ನಾನು ಹುಟ್ಟಿದಾಗಿನಿಂದಲೂ ಚಿಂಚೋಡಿ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಈಗ 65 ವರ್ಷ ವಯಸ್ಸು ಇರುತ್ತದೆ. ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ನನಗೆ ನೋಟಿಸ್ ಬಂದಿತ್ತು. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ರಾಮನಗೌಡ ಇವರು ಗೋವಿಂದರಾಯನ ಮೇಲೆ ದಾವೆಯನ್ನು ಸಲ್ಲಿಸಿರುತ್ತಾರೆ.

ರಾಮನಗೌಡನ ಹೆಂಡತಿ ಮಕ್ಕಳು ನನಗೆ ಪರಿಚಯ ಇರುತ್ತಾರೆ. ಅದೇ ರೀತಿ ಗೋವಿಂದರಾಯನ ಹೆಂಡತಿ ಮಕ್ಕಳು ನನಗೆ ಪರಿಚಯ ಇರುತ್ತಾರೆ. ವಾದಿ ಮತ್ತು ಆತನ ಹೆಂಡತಿ ಮಕ್ಕಳು 18 ವರ್ಷಗಳಿಂದೆ ಬೆಂಗಳೂರಿಗೆ ಕೂಲಿ ಮಾಡಲು ಹೋಗಿರುತ್ತಾರೆ ಮತ್ತು ಅಲ್ಲಿ ಜೀವನ ಮಾಡುತ್ತಾರೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೆನೆ ಎನ್ನುವುದು ನಿಜ ಇರುತ್ತದೆ.

2. ವಾದಿ ಈ ದಾವೆಯನ್ನು ಸರ್ವೆ ನಂಬರ್ 18 ರಲ್ಲಿ 02 ಗುಂಟೆ ಮೇಲೆ ಸಲ್ಲಿಸಿರುತ್ತಾನೆ. ಚಿಂಚೋಡಿ ಗ್ರಾಮದಲ್ಲಿ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಮನೆಯನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಮೊದಲು ಹಳೆ ಮನೆ ಕಟ್ಟಿದ್ದರು ನಂತರ ಅದನ್ನು ಕೆಡವಿ ಹೊಸ ಮನೆ ಕಟ್ಟಿದ್ದಾರೆ ಎನ್ನುತ್ತಾರೆ . ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಸುಮಾರು 15 ವರ್ಷದಿಂದ ಅವರ ಮನೆಯಲ್ಲಿ ವಾಸ ಮಾಡಿಕೊಂಡಿದ್ದಾರೆ. ಪ್ರತಿವಾದಿ ಹೊಸದಾಗಿ ಮನೆ ಕಟ್ಟಿರುವುದು ಅವರ ಜಮೀನಿನಲ್ಲಿ ಇರುತ್ತದೆ, ಹಳೆ ಮನೆ ದಾವಾ ಜಮೀನಿನಲ್ಲಿ ಇರುತ್ತದೆ. ಹಳೆ ಮನೆಗೂ ಮತ್ತು ಹೊಸಮನೆಗೂ ಜಂಟಿ ಗೋಡೆ ಇರುತ್ತದೆ ಮತ್ತು ಮದ್ಯದಲ್ಲಿ ಒಂದು ದಾರಿ ಮಾಡಿಕೊಂಡಿರುತ್ತಾರೆ. ಹೊಸ ಮನೆ ಕಟ್ಟಿ ಅಂದಾಜು ಈಗ 3-4 ವರ್ಷಗಳಾಗಿರುತ್ತದೆ. ಪ್ರತಿವಾದಿಗಳು ಹೊಸ ಮನೆ ಕಟ್ಟುವಾಗ ಯಾರ ಜಾಗದಲ್ಲಿ ಕಟ್ಟುತ್ತಿದ್ದಾರೆಂದು ಕೇಳಿರುವುದಿಲ್ಲ ಅವರು ತಮ್ಮ ಜಾಗದಲ್ಲಿ ಕಟ್ಟಿರುತ್ತಾರೆ.

3. ಪ್ರತಿವಾದಿ 1978 ರಿಮದ ಚಿಂಚೋಡಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ದಾವಾ ಜಮೀನಿನ ಪಹಣಿಯನ್ನು ನಾನು ನೋಡಿದ್ದೇನೆ. ಸರ್ವೆ ನಂಬರ್ 18 ರಲ್ಲಿ ಪ್ರತಿವಾದಿ 03 ಗುಂಟೆ ಜಮೀನಿನ ಮಾಲೀಕರು ಇದ್ದಾರೆ ಎಂದರೆ ಸಾಕ್ಷಿದಾರರು ಇರಬಹುದು ಎನ್ನುತ್ತಾರೆ. ಪ್ರತಿವಾದಿ ತನ್ನ ಜಮೀನಿನಲ್ಲಿ ಆಡು, ಕುರಿ,ಗಳನ್ನು ಕಟ್ಟಿಕೊಂಡು ತನ್ನ ಜೀವನವನ್ನು ಮಾಡುತ್ತಿದ್ದಾನೆ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ 02 ಗುಂಟೆ ಆಸ್ತಿ ಇರುತ್ತದೆ ಅದರ ಚಕ್ ಬಂದಿ ಹೇಳಲು ನನಗೆ ಬರುತ್ತದೆ ಪೂರ್ವಕ್ಕೆ

ರಂಗಮ್ಮ ಗಂಡ ಲಚಮಣ್ಣ ಇವರ ಹೊಲ ಇದೆ, ಪಶ್ಚಿಮಕ್ಕೆ ದಾರಿ ಇದೆ, ದಕ್ಷಿಣಕ್ಕೆ ರಾಮನಗೌಡನ ಜಾಗ, ಉತ್ತರ ದಿಕ್ಕಿಗೆ ಗೋವಿಂದರಾಯ ಪ್ರತಿವಾದಿ ಇವರ ಜಾಗ ಇರುತ್ತದೆ. ರಾಮನಗೌಡ ತೀರಿಕೊಂಡಿರುತ್ತಾರೆ, ಇವತ್ತು ನನ್ನನ್ನು ರಾಮನಗೌಡನ ಮಕ್ಕಳು ಸಾಕ್ಷಿ ನುಡಿಯಲು ಬರಬೇಕೆಂದು ತಿಳಿಸಿರುತ್ತಾರೆ. ರಾಮನಗೌಡನ ಮಕ್ಕಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ